# ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.

ಸಿ.ಸಿ. ನಂ.17/2022

ಪಿ.ಡಬ್ಲ್ಯೂಃ 5

ಸಿಡಬ್ಲ್ಯೂ-9

ಸಾಕ್ಷಿದಾರರ ಹೆಸರು : ಸಂಜೀವ ಕಾಶಿನಾಥ ನಾಯ್ಕ

ತಂದೆಯ ಹೆಸರು : ಕಾಶಿನಾಥ ನಾಯ್ಕ

ವಯಸ್ಸು : 49 ವರ್ಷ

ಉದ್ಯೋಗ : ಮುಖ್ಯ ಪೇದೆ , ಜಿಲ್ಲಾ ಸಶ್ರಾಸ್ತ್ರ ಮೀಸಲು ಪಡೆ

ವಾಸ : ಕಾರವಾರ

ದಿನಾಂಕಃ 24-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.ಸ

**<u>ಮುಖ್ಯ ವಿಚಾರಣೆಃ</u> ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

1. ನಾನು ಕಳೆದ 29 ವರ್ಷಗಳಿಂದ ಜಿಲ್ಲಾ ಸಶ್ರಾಸ್ತ್ರ ಮೀಸಲು ಪಡೆ ಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನಾನು ಆಯುಧಗಳ ಬಗ್ಗೆ ತರಬೇತಿ ಜಿಲ್ಲಾ ಶಸ್ತ್ರಗಾರರಲ್ಲಿ ಕೆಲಸ ಮಾಡುತ್ತಿದ್ದೇನೆ.

2. ದಿನಾಂಕಃ 29-09-2020 ರಂದು ಉಪ ವಲಯ ಅರಣ್ಯಾಧಿಕಾರಿ ಕಚೇರಿಗೆ ಬಂದೂಕು ಅನ್‌ಲೋಡ್ ಮಾಡಲು ಉಪ ವಲಯ ಅರಣ್ಯಾಧಿಕಾರಿ ಕಚೇರಿಯಿಂದ ಕರೆಸಿದ್ದರು. ಸುರಕ್ಷತೆ ದೃಷ್ಟಿಯಿಂದ ಹಾಗೂ ಅನಾಹುತ ಆಗಬಾರದು ಎಂದು ಬಂದೂಕಿನಲ್ಲಿದ್ದ ಸುಮಾರು 5 ಗ್ರಾಂ ಗನ್ ಪೌಡರ್ ಹಾಗೂ 4 ಸಿಸದ ಗುಂಡುಗಳನ್ನು ಅನ್‌ಲೋಡ್ ಮಾಡಿ, ಉಪ ವಲಯ ಅರಣ್ಯಾಧಿಕಾರಿಗೆ ಅವುಗಳನ್ನು ಕೊಟ್ಟೆ . ಈ ಬಗ್ಗೆ ಪಂಚನಾಮೆ ಬರೆದಿದ್ದು, ಸ್ರದ್ರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-26 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-26 (ಡಿ) ಎಂದು ಗುರುತಿಸಲಾಯಿತು. ಆ ಪಂಚನಾಮೆಯನ್ನು ಸುಮಾರು 12-30 ಯಿಂದ 1-00 ಗಂಟೆಯ ತನಕ

ಜರುಗಿಸಲಾಗಿದೆ. ಆ ಸಮಯದಲ್ಲಿ ಪಂಚರು ಚಾಸಾ -2 ಮತ್ತು ಚಾಸಾ-3 ಇದ್ದರು. ವಲಯ ಅರಣ್ಯಾಧಿಕಾರಿ ಎನ್ ಪಿ. ನಾಯ್ಕ ಹಾಗೂ ಇನ್ನೊಬ್ಬ ಅರಣ್ಯ ರಕ್ಷಕರು ಇದ್ದರು. ಆ ಅರಣ್ಯ ರಕ್ಷಕರ ಹೆಸರು ಗೊತ್ತಿಲ್ಲ. ಆದರೆ ಅವರ surname ನಾಯ್ಕ ಎಂದು ಇರುತ್ತದೆ. ನಾನು ಅನ್‌ಲೋಡ್ ಮಾಡಿದ ಬಂದೂಕನ್ನು ನೋಡಿ ಗುರುತಿಸಿದ್ದು , ಅದನ್ನು ಈಗಾಗಲೇ ಮು.ಮಾ-3 ಎಂದು ಗುರುತಿಸಲಾಯಿತು. ಆ ಕಚೇರಿಯಲ್ಲಿ , ಆ ಬಂದೂಕನ್ನು ಕಡವೆ ಬೇಟೆ ಯಾಡಲು ಉಪಯೋಗಿಸಿದ್ದರು ಎಂದು ತಿಳಿಸಿದರು.

**ಪಾಟೀ ಸವಾಲು ವಕೀಲರ ಕೋರಿಕೆ ಯ ಮೇರೆಗೆ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.